JGi

**IN THE MEDIA**

# THE TIMES OF INDIA
**KANNADA**

Thursday, September 17th, 2009



ಡಿಮಾಂಡಪ್ಪೋ ಡಿಮಾಂಡು: ಪಂಕಜ್ ಆಡ್ವಾಣಿಯನ್ನು ಆಟೋಗ್ರಾಫ್‌ಗಾಗಿ ಮುತ್ತಿಕೊಂಡ ಅಭಿಮಾನಿಗಳು.

## ಪಂಕಜ್ ಆಡ್ವಾಣಿಗೆ ಸನ್ಮಾನ

ಟೈಮ್ಸ್ ನ್ಯೂಸ್ ನೆಟ್‌ವರ್ಕ್

**ಬೆಂಗಳೂರು:** ವಿಶ್ವ ವೃತ್ತಿಪರ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್ ವಿಜೇತ ಪಂಕಜ್ ಆಡ್ವಾಣಿಯನ್ನು ಜೈನ್ ಶಿಕ್ಷಣ ಸಮೂಹ ಸಂಸ್ಥೆಗಳ ಪರವಾಗಿ 1 ಲಕ್ಷ ರೂ. ಪ್ರೋತ್ಸಾಹಧನ ನೀಡಿ ಸನ್ಮಾನಿಸಲಾಯಿತು.

ಪದ್ಮಶ್ರೀ ಪುರಸ್ಕೃತ ಪಂಕಜ್, 'ಮಕ್ಕಳ ಕನಸು ನನಸಾಗಲು ಪೋಷಕರ ಪಾತ್ರ ಮಹತ್ವದ್ದಾಗಿರುತ್ತದೆ. ಪೋಷಕರು ಮಕ್ಕಳ ಆಸಕ್ತಿಗೆ ನೀರೆರೆದು ಪೋಷಿಸಬೇಕು. ಕೆಲವೊಮ್ಮೆ ನಮ್ಮ ಪ್ರಯತ್ನಕ್ಕೆ ಫಲ ಲಭಿಸಲಿಕ್ಕಿಲ್ಲ, ಆಗ ಅದು ವ್ಯಕ್ತಿಯ ವಿಫಲತೆಯಲ್ಲ, ಒಂದು ಪ್ರಯತ್ನದ ವಿಫಲತೆಯಷ್ಟೇ ಎಂಬುದನ್ನು ಅರ್ಥೈಸಿಕೊಂಡು ಮತ್ತೊಂದು ಯತ್ನಕ್ಕೆ ಸಜ್ಜಾಗಬೇಕು' ಎಂದರು.

ಮಹತ್ಸಾಧನೆ ಒಬ್ಬರಿಂದ ಮಾತ್ರ ಸಾಧ್ಯವಿಲ್ಲ. ಅದರ ಹಿಂದೆ ಹಲವರ ಪರಿಶ್ರಮವಿರುತ್ತದೆ. ನನ್ನ ಸಾಧನೆಗೆ ಪ್ರೋತ್ಸಾಹ ನೀಡಿದ ಪೋಷಕರು, ಕೋಚ್ ಹಾಗೂ ಕ್ರೀಡೆಯಲ್ಲಿ ಪ್ರಗತಿ ಸಾಧಿಸಲು ಅವಕಾಶ ಮಾಡಿಕೊಟ್ಟ ಜೈನ್ ಕಾಲೇಜ್ ಸಿಬ್ಬಂದಿಯ ಬೆಂಬಲವನ್ನು ಎಂದಿಗೂ ಮರೆಯುವುದಿಲ್ಲ ಎಂದು ಆಡ್ವಾಣಿ ಹೇಳಿದರು.

ನನ್ನ ವೃತ್ತಿ ಪಯಣ ಪ್ರಯಾಸಕರವಾಗಿತ್ತು. ಹಲವಾರು ಅಡೆತಡೆಗಳನ್ನು ಎದುರಿಸಿದ್ದೇನೆ. ಆದರೆ ಧೈರ್ಯಗುಂದದೇ ಮುನ್ನಡೆದಿದ್ದರಿಂದ ವಿಶ್ವ ಮಟ್ಟದ ಸಾಧನೆ ಮಾಡಲು ಸಾಧ್ಯವಾಯಿತು. ಕಷ್ಟಪಟ್ಟು ಗಳಿಸಿದ ಯಶಸ್ಸನ್ನು ಮಾತ್ರ ಆನಂದಿಸಲು ಸಾಧ್ಯ. ಧನಾತ್ಮಕವಾಗಿ ಚಿಂತಿಸುವುದನ್ನು ರೂಢಿಸಿಕೊಳ್ಳಬೇಕು ಎಂದು ಪಂಕಜ್ ಆಡ್ವಾಣಿ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಜೈನ್ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥ ಆರ್ ಚೆನ್‌ರಾಜ್ ಜೈನ್, ಕ್ರೀಡಾ ನಿರ್ದೇಶಕ ಯುವಿ ಶಂಕರ್ ಉಪಸ್ಥಿತರಿದ್ದರು.

**Office of Corporate Affairs**
Jain Group of Institutions